ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಚಿಕ್ಕಮಗಳೂರು

**<u>ಸೆಷನ್ಸ್ ಕೇಸ್ ನಂ.160-2025</u>**

ಫಿರ್ಯಾದುದಾರರು ರಾಜ್ಯದ ಪರವಾಗಿ ಎನ್ ಆರ್ ಪುರ ಆರಕ್ಷಕ ಠಾಣೆ.

ವಿರುದ್ಧ

ಆರೋಪಿತರು 1. ಸತ್ಯಾನಂದ ಮತ್ತು ನಾಲ್ವರು

<u>ದೋಷಾರೋಪಣೆ</u>

ಶ್ರೀ ರವೀಂದ್ರ ಹೆಗಡೆ , ಎಂ.ಎ., ಎಲ್ ಎಲ್ ಎಂ. ಚಿಕ್ಕಮಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಆದ ನಾನು , ಈ ಕೆಳಕಂಡ ಆರೋಪಿತರಾದಃ-

1. ಸತ್ಯಾನಂದ ,
   ಬಿನ್ ಕುಮಾರ್
   26 ವರ್ಷ , ಕೂಲಿ
   ತರೀಕಟ್ಟೆ ಹಿರಿಯೂರು ಅಂಚೆ ,
   ಭದ್ರಾವತಿ ತಾಲೂಕು ಶಿವಮೊಗ್ಗ .
2. ಸೈಯದ್ ಲತೀಫ್
   ಬಿನ್ ಸೈಯದ್ ನಜೀರ್
   ಮೆಕಾನಿಕ್ 25 ವರ್ಷ
   ವಾಸ ಅಪ್ಪಾಜಿ ಬಡಾವಣೆ
   ಹಿರಿಯೂರು
   ಭದ್ರಾವತಿ ತಾಲೂಕು ಶಿವಮೊಗ್ಗ
3. ಮಧುಕುಮಾರ್ ಹೆಚ್ ವೈ ಯಾನೆ ಗುಂಡ
   ಬಿನ್ ಯುವರಾಜ
   ಕೂಲಿ 18 ವರ್ಷ
   ವಾಸ ಅಪ್ಪಾಜಿ ಬಡಾವಣೆ
   ಹಿರಿಯೂರು

ಭದ್ರಾವತಿ ತಾಲೂಕು ಶಿವಮೊಗ್ಗ

4 ಜಾಫರ್ ಸಾದಿಕ್ ಯಾನೆ ತಿಮ್ಮ
ಬಿನ್ ಲೇಟ್ ದಾದಾಪೀರ್
ಕೂಲಿ 22 ವರ್ಷ
ವಾಸ ಅಪ್ಪಾಜಿ ಬಡಾವಣೆ
ಹಿರಿಯೂರು
ಭದ್ರಾವತಿ ತಾಲೂಕು ಶಿವಮೊಗ್ಗ

5 ಕೀರ್ತನ್ - ಬೇರ್ಪಡಿಸಲಾಗಿದೆ

ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆ፡

ದಿನಾಂಕ : 23-07-2025 ರಂದು ಬೆಳಿಗ್ಗೆ 4.45 ಗಂಟೆ ಸಮಯದಲ್ಲಿ ಎನ್ ಆರ್ ಪುರ ಠಾಣಾ ವ್ಯಾಪ್ತಿಗೆ ಬರುವ ಶೆಟ್ಟಿ ಕೊಪ್ಪ ಗ್ರಾಮದ ಭದ್ರಾ ಕಾಲೋನಿ ಹತ್ತಿರ ಹಾದು ಹೋಗಿರುವ ಎನ್ ಆರ್ ಪುರ – ಶಿವಮೊಗ್ಗ ಮುಖ್ಯ ರಸ್ತೆಯಲ್ಲಿ 1 ರಿಂದ 4 ನೇ ಆರೋಪಿತರಾದ ನೀವುಗಳು ಇನ್ನೊಬ್ಬ ಆರೋಪಿ ಮತ್ತು ಮೂವರು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರೊಂದಿಗೆ ಡಕಾಯಿತಿ ಮಾಡಲು ಕತ್ತಿ ಕಬ್ಬಿಣದ ಪೈಪ್ ಮತ್ತು ರೊಲರ್ ದೊಣ್ಣೆಗಳನ್ನು ಇಟ್ಟುಕೊಂಡು ಕಾಯುತ್ತಿದ್ದಾಗ, ಚಾಸಾ፡1 ಮನು ಹೆಚ್. ರವರು ಚಾಸಾ፡12 ಅಭಿಷೇಕ್ ಮತ್ತು ಚಾಸಾ፡13 ಧರ್ಶನ್ ರವರೊಂದಿಗೆ KA1406478 ಪಿಕ್ ಆಪ್ ವಾಹನದಲಿ.. ಅಲ್ಲಿಗೆ ಬಂದಿದ್ದು , ಆಗ 1 ರಿಂದ 4 ನೇ ಆರೋಪಿತರಾದ ನೀವುಗಳು ಇನ್ನೊಬ್ಬ ಆರೋಪಿ ಮತ್ತು ಮೂವರು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರು ಸೇರಿಕೊಂಡು ನೀವುಗಳು ತಂದಿದ್ದ ಕೆಎ-49-ಎಂ7172 ಕಾರು ಮತ್ತು ಕೆಎ፡19-ಪಿ-6263 ಕಾರನ್ನು ಚಾಸಾ፡1 ರವರ ವಾಹನವನ್ನು ಅಡ ಗಟ್ಟಿ ನಿಲ್ಲಿಸಿದ್ದು ನಂತರ 2 ನೇ ಆರೋಪಿಯಾದ ನೀವು ಸ್ಪಾನರ್ ಕೇಳುವ ನೆಪದಲ್ಲಿ ಬಂದು ಚಾಸಾ፡1 ರವರ ವಾಹನವನ್ನು ಆಫ್ ಮಾಡಿ ಕೀ ತೆಗೆದುಕೊಂಡಿದ್ದು , ನಂತರ ನಿಮ್ಮ ಪೈಕಿ ನಿಮ್ಮ ಕೈಯಲ್ಲಿದ್ದ ಕತ್ತಿ (ಲಾಂಗ್),

ನಿಮ್ಮ ಪೈಕಿ 3 ನೇ ಆರೋಪಿ ರೋಲರ್ ದೋಣೆಯನ್ನು , ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಶ್ರೀಕಾಂತನು ಕಬ್ಬಿಣದ ಪೈಪ್ ನ್ನು ಹಿಡಿದು ವಾಹನದಿಂದ ಇಳಿದಿದ್ದು, ಇದನ್ನು ನೋಡಿದ ಚಾಸಾಃ1 ಮತ್ತು ಚಾಸಾಃ12 ರವರು ಪಿಕ್ ಅಪ್ ವಾಹನದಿಂದ ಇಳಿದು ಓಡಿದ್ದು ಆಗ ನಿಮ್ಮ ಪೈಕಿ 1 ಮತ್ತು 2 ಆರೋಪಿತರು ಮತ್ತು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಶ್ರೀಕಾಂತನು ಚಾಸಾಃ1 ರವರನ್ನು ಹಿಂಬಾಲಿಸಿ, ಚಾಸಾಃ1 ರವರನ್ನು ಹಿಡಿದುಕೊಂಡಿದ್ದು , ನೀವು ಎಲ್ಲಾ ಆರೋಪಿತರು ಚಾಸಾಃ1 ರವರಿಗೆ ಹಲ್ಲೆ ಮಾಡಿದ್ದು, ಆ ಸಮಯದಲಿ., ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಶ್ರೀಕಾಂತನು ತನ್ನ ಕೈಯಲ್ಲಿದ್ದ ಕಬ್ಬಿಣದ ರಾಡಿನಿಂದ ಚಾಸಾಃ1 ರವರ ತಲೆಗೆ ಹಲ್ಲೆ ಮಾಡಿ ಅವರ ತಲೆಗೆ ಸಾಮಾನು ಸ್ವರೂಪದ ರಕ್ತಗಾಯವನ್ನುಂಟುಮಾಡಿದ್ದು, ನಂತರ ನಿಮ್ಮ ಪೈಕಿ 1 ನೇ ಆರೋಪಿ ಚಾಸಾಃ1 ರವರ ಕೈಯ್ಯಲ್ಲಿದ್ದ 20 ಗ್ರಾಂ ತೂಕದ ಬೆಳ್ಳಿಯ ಬ್ರಾಸ್ಲೈಟನ್ನು ಕಿತ್ತುಕೊಂಡಿದ್ದು , ನಿಮ್ಮ ಪೈಕಿ 1 ಮತ್ತು 2 ಆರೋಪಿತರು ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಶ್ರೀಕಾಂತ ಚಾಸಾಃ1 ರವರನ್ನು ಪಿಕ್ ಅಪ್ ವಾಹನದ ಹತ್ತಿರ ಎಳೆದುಕೊಂಡು ಬಂದಿದ್ದು , ಚಾಸಾಃ13 ದರ್ಶನ್ ರವರನ್ನು ನಿಮ್ಮ ಪೈಕಿ 3 ನೇ ಆರೋಪಿ ಮತ್ತು ಇನ್ನೊಬ್ಬ ಆರೋಪಿ ( 5 ನೇ ಆರೋಪಿ) ಹಿಡಿದುಕೊಂಡಿದ್ದು, ಆಗ ನಿಮ್ಮ ಪೈಕಿ 3 ನೇ ಆರೋಪಿಯ ಚಾಸಾಃ13 ರವರ ಮೈಗೆ ರೋಲರ್ ಡೊಣ್ಣೆಯಿಂದ ಹಲ್ಲೆ ಮಾಡಿದ್ದು , ನಿಮ್ಮ ಪೈಕಿ 1 ನೇ ಆರೋಪಿ ನಿಮ್ಮ ಕೈಯಲ್ಲಿದ್ದ ಲಾಂಗನ್ನು ತೋರಿಸಿ ಹೆದರಿಸಿ ಚಾಸಾಃ13 ರವರ ಕುತ್ತಿಗೆಯಲ್ಲಿದ್ದ 23 ಗ್ರಾಂ ತೂಕದ ಬೆಳ್ಳಿಯ ಸರವನ್ನು ಕಿತ್ತುಕೊಂಡಿದ್ದು , ನಂತರ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಶ್ರೀಕಾಂತನು ಚಾಸಾಃ1 ರವರು ಚಲಾಯಿಸುತ್ತಿದ ಪಿಕ್ ಅಪ್ ವಾಹನದ ಒಳಗೆ ನೋಡಿ ಡ್ಯಾಶ್ ಬೋರ್ಡಿನಲ್ಲಿದ್ದ 2 ಲಕ್ಷ ನಗದು ಹಣ, ಚಾಸಾಃ12 ಮತ್ತು ಚಾಸಾಃ1 ರವರ ಬಾಬ್ತು 2 ಮೊಬೈಲ್ ಗಳು ಹಾಗೂ ಪಿಕ್ ಆಪ್ ನಲಿದ್ದ ಮ್ಯೂಸಿಕ್ ಸಿಸ್ಟಂ

ಅನ್ನು ತೆಗೆದುಕೊಂಡಿದ್ದು , ನಂತರ ಸ್ಥಳದಲಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರಾದ ಜಯಂತ್ ಕುಮಾರ್ ಮತ್ತು ಇರ್ಫಾನ್ ರವರು ಪಿಕ್ ಅಪ್ ವಾಹನದಲ್ಲಿದ್ದ 2 ಬಾಕ್ಸ್ ಕೋಳಿಗಳನ್ನು ಕೆಳಗೆ ಹಾಕಿದ್ದು ಆಗ ನಿಮ್ಮ ಪೈಕಿ 4 ನೇ ಆರೋಪಿಯು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರಾದ ಇರ್ಫಾನ್ ಹಾಗೂ ಜಯಂತ್ ಕುಮಾರ್ ರವರೊಂದಿಗೆ ಸೇರಿ ಆರೋಪಿತರಾದ ನೀವುಗಳು ಬಂದಿದ್ದ ಕಾರಿನೊಳಗೆ ತುಂಬಿಸಿಕೊಂಡಿದ್ದು, ನಂತರ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಶ್ರೀಕಾಂತನು ಚಾಸಾಃ1 ಮತ್ತು ಸಾಕ್ಷಿ ಚಾಸಾಃ13 ರವರನ್ನು ಪಿಕ್ ಆಪ್ ಕಾರಿನ ಒಳಗೆ ಕೂರಿಸಿ ಇಲ್ಲಿಂದ ಹೋಗಬೇಕು ಇಲ್ಲೇ ಇದ್ದರೆ ಸಾಯಿಸುತ್ತೇನೆಂದು ಕಬ್ಬಿಣದ ಪೈಪು ತೋರಿಸಿ ಹೆದರಿಸಿ ಪಿಕ್ ಅಪ್ ವಾಹನದಲ್ಲಿ ಕೂರಿಸಿದ್ದು, ನಂತರ ಅವರನ್ನು ಮಡಬೂರು ಹತ್ತಿರದ ವರೆಗೆ ನಿಮ್ಮ ಪೈಕಿ 1, 2 ಮತ್ತು 5 ನೇ ಆರೋಪಿತರು ಕಾರಿನಲಿ ಫಾಲೋ ಮಾಡಿ ಕಳುಹಿಸಿ ದ್ದು , ಆ ರೀತಿ ಬೆಲೆಬಾಳುವ ವಸ್ತುಗಳನ್ನು ಮತ್ತು ನಗದು ಹಣ ಮತ್ತು ಎರಡು ಮೊಬೈಲ್ ಫೋನುಗಳನ್ನು ದರೋಡೆ ಮಾಡಿಕೊಂಡು ಹೋಗಿದ್ದು, ಕಾರಣ ನೀವು 1 ರಿಂದ 4 ನೇ ಆರೋಪಿಗಳು ಬಿ ಎನ್ ಎಸ್ ಕಲಂ 310(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಎಂದು ನಿಮ್ಮ ಮೇಲೆ ಅಪಾಧನೆ ಮಾಡಿದ್ದೇನೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 4 ನೇ ಆರೋಪಿತರಾದ ನೀವುಗಳು ಇನ್ನೊಬ್ಬ ಆರೋಪಿ ಮತ್ತು ಮೂವರು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರೊಂದಿಗೆ ಚಾಸಾಃ1 ಮನು ಹೆಚ್. ರವರ KA1406478 ಪಿಕ್ ಆಪ್ ವಾಹನವನ್ನು ಅಡ್ಡಗಟ್ಟಿದ್ದು , 1 ರಿಂದ 4 ನೇ ಆರೋಪಿತರಾದ ನೀವುಗಳು ಇನ್ನೊಬ್ಬ ಆರೋಪಿ ಮತ್ತು ಮೂವರು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರು ಸೇರಿಕೊಂಡು, ನಿಮ್ಮ ಪೈಕಿ 2 ನೇ ಆರೋಪಿ ಸ್ಪಾನರ್ ಕೇಳುವ ನೆಪದಲ್ಲಿ ಚಾಸಾಃ1 ರವರ ವಾಹನವನ್ನು ಆಫ್

ಮಾಡಿ ಕೀ ತೆಗೆದುಕೊಂಡಿದ್ದು , ನಂತರ ನೀವೆಲ್ಲರೂ ಚಾಸಾಃ1 ರವರ ಮೇಲೆ ಹಲ್ಲೆ ಮಾಡಿದ್ದು, ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಶ್ರೀಕಾಂತನು ತನ್ನ ಕೈಯಲ್ಲಿದ್ದ ಕಬ್ಬಿಣದ ರಾಡಿನಿಂದ ಚಾಸಾಃ1 ರವರ ತಲೆಗೆ ಹಲ್ಲೆ ಮಾಡಿ ಅವರ ತಲೆಗೆ ಸಾಮಾನು ಸ್ವರೂಪದ ರಕ್ತಗಾಯವನ್ನುಂಟುಮಾಡಿದ್ದು, ನಂತರ ನಿಮ್ಮ ಪೈಕಿ 1 ನೇ ಆರೋಪಿ ಚಾಸಾಃ1 ರವರ ಕೈಯ್ಯಲ್ಲಿದ್ದ 20 ಗ್ರಾಂ ತೂಕದ ಬೆಳ್ಳಿಯ ಬ್ರಾಸ್ಲೈಟನ್ನು ಕಿತ್ತುಕೊಂಡಿದ್ದು , ನಿಮ್ಮ ಪೈಕಿ 1 ಮತ್ತು 2 ಆರೋಪಿತರು ಹಾಗೂ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಶ್ರೀಕಾಂತ ಚಾಸಾಃ1 ರವರನ್ನು ಪಿಕ್ ಅಪ್ ವಾಹನದ ಹತ್ತಿರ ಎಳೆದುಕೊಂಡು ಬಂದಿದ್ದು , ಚಾಸಾಃ13 ದರ್ಶನ್ ರವರನ್ನು ನಿಮ್ಮ ಪೈಕಿ 3 ನೇ ಆರೋಪಿ ಮತ್ತು ಇನ್ನೊಬ್ಬ ಆರೋಪಿ ( 5 ನೇ ಆರೋಪಿ) ಹಿಡಿದುಕೊಂಡಿದ್ದು, ಆಗ ನಿಮ್ಮ ಪೈಕಿ 3 ನೇ ಆರೋಪಿಯ ಚಾಸಾಃ13 ರವರ ಮೈಗೆ ರೋಲರ್ ದೊಣ್ಣೆಯಿಂದ ಹಲ್ಲೆ ಮಾಡಿದ್ದು , ನಿಮ್ಮ ಪೈಕಿ 1 ನೇ ಆರೋಪಿ ನಿಮ್ಮ ಕೈಯಲ್ಲಿದ್ದ ಲಾಂಗನ್ನು ತೋರಿಸಿ ಹೆದರಿಸಿ ಚಾಸಾಃ13 ರವರ ಕುತ್ತಿಗೆಯಲ್ಲಿದ್ದ 23 ಗ್ರಾಂ ತೂಕದ ಬೆಳ್ಳಿಯ ಸರವನ್ನು ಕಿತ್ತುಕೊಂಡಿದ್ದು , ನಂತರ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಶ್ರೀಕಾಂತನು ಚಾಸಾಃ1 ರವರು ಚಲಾಯಿಸುತ್ತಿದ ಪಿಕ್ ಅಪ್ ವಾಹನದ ಒಳಗೆ ನೋಡಿ ಡ್ಯಾಶ್ ಬೋರ್ಡಿನಲ್ಲಿದ್ದ 2 ಲಕ್ಷ ನಗದು ಹಣ, ಚಾಸಾಃ12 ಮತ್ತು ಚಾಸಾಃ1 ರವರ ಬಾಬ್ತು 2 ಮೊಬೈಲ್ ಗಳು ಹಾಗೂ ಪಿಕ್ ಆಪ್ ನಲಿದ್ದ ಮ್ಯೂಸಿಕ್ ಸಿಸ್ಟಂ ಅನ್ನು ತೆಗೆದುಕೊಂಡಿದ್ದು, ನಂತರ ಸ್ಥಳದಲಿದ್ದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರಾದ ಜಯಂತ್ ಕುಮಾರ್ ಮತ್ತು ಇರ್ಫಾನ್ ರವರು ಪಿಕ್ ಅಪ್ ವಾಹನದಲ್ಲಿದ್ದ 2 ಬಾಕ್ಸ್ ಕೋಳಿಗಳನ್ನು ಕೆಳಗೆ ಹಾಕಿ , ನಿಮ್ಮ ಪೈಕಿ 4 ನೇ ಆರೋಪಿಯು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರಾದ ಇರ್ಫಾನ್ ಹಾಗೂ ಜಯಂತ್ ಕುಮಾರ್ ರವರೊಂದಿಗೆ ಸೇರಿ ಆರೋಪಿತರಾದ ನೀವುಗಳು ಬಂದಿದ್ದ ಕಾರಿನೊಳಗೆ ತುಂಬಿಸಿಕೊಂಡಿದ್ದು, ಈ ರೀತಿಯಾಗಿ ಆರೋಪಿತರಾದ ನೀವುಗಳು

ಚಾಸಾ:1 ಮತ್ತು ಚಾಸಾ:13 ರವರ ಮೇಲೆ ಹಲ್ಲೆ ಮಾಡಿ ಅವರಿಗೆ ಸಾಮಾನ್ಯ ಸ್ವರೂಪದ ರಕ್ತಗಾಯನ್ನುಂಟು ಮಾಡಿದ್ದು, ಆ ಮೂಲಕ 1 ರಿಂದ 4 ನೇ ಆರೋಪಿತರಾದ ನೀವುಗಳು ಬಿ.ಎನ್.ಎಸ್ ಕಲಂ 311 ಸಹ ಕಲಂ 3(5) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು ಅರೋಪಿತರಾದ ನೀವುಗಳು ಮೇಲೆ ಹೇಳಿದ ಆರೋಪಗಳ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 10.08. 2026

ಸಹಿ

(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.

**1** ನೇ ಆರೋಪಿ - ಸತ್ಯಾನಂದ

ಆರೋಪಿಯ ಆಪಾದನೆ

ಪ್ರಶ್ನೆ -1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ: ತಿಳಿಯಿತು
ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ನಾನು ತಪ್ಪು ಮಾಡಿಲ್ಲ .

(ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.

**2** ನೇ ಆರೋಪಿ - ಸೈಯದ್ ಲತೀಫ್

ಆರೋಪಿಯ ಆಪಾದನೆ

ಪ್ರಶ್ನೆ -1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ: ತಿಳಿಯಿತು
ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ನಾನು ತಪ್ಪು ಮಾಡಿಲ್ಲ .

(ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.

**3** ನೇ ಆರೋಪಿ **-** ಮಧುಕುಮಾರ್

ಆರೋಪಿಯ ಆಪಾದನೆ

ಪ್ರಶ್ನೆ -1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ: ತಿಳಿಯಿತು
ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ನಾನು ತಪ್ಪು ಮಾಡಿಲ್ಲ .

(ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

**(**ರವೀಂದ್ರ ಹೆಗಡೆ**)**
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.

**4** ನೇ ಆರೋಪಿ **-** ಜಾಫರ್ ಸಾದಿಕ್ ಯಾನೆ ತಿಮ್ಮ

ಆರೋಪಿಯ ಆಪಾದನೆ

ಪ್ರಶ್ನೆ -1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ: ತಿಳಿಯಿತು
ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ನಾನು ತಪ್ಪು ಮಾಡಿಲ್ಲ .

(ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
**(**ರವೀಂದ್ರ ಹೆಗಡೆ**)**
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.

*mvp/-